# ಗಾಂಧಿ ತಾತನ ನೆನೆವೆವು

ಗಾಂಧಿತಾತನು ಶಾಂತಿದೂತನು
ಕರುಣೆಯ ಕಡಲಿವನು
ಸರಳ ಸೂತ್ರದಿ ಬಾಳ ಜೀವನ
ದಿಟ್ಟ ದನಿಯವನು

ಗಾಂಧಿತಾತನು ಸುಜನ ಸಂಜಾತ
ಸದಾ ವಂದಿತನು
ಸ್ವಾತಂತ್ರ್ಯಕಾಗಿ ಸತ್ಯಾಗ್ರಿಯಾದ
ಸೂತ್ರಧಾರನಿವನು

ಗಾಂಧಿತಾತನು ಸರಳ ಸಂತನು
ಬಾನುದ್ದ ಬೆಳೆದವನು
ಹೆಡೆಯೆತ್ತಿದ ಆಂಗ್ಲರ ಸಾಮ್ರಾಜ್ಯಕೆ
ಕಡೆಗಾಲ ತಂದವನು

ಗಾಂಧಿತಾತನು ಸಿದ್ಧ ಸೂತ್ರನು
ಕೋಲು ಹಿಡಿದೇ ನಡೆದವನು
ಬರಿಗೈಯಲ್ಲಿ ಅಹಿಂಸೆ ಅಸ್ತ್ರ
ಯುದ್ಧವ ಗೆದ್ದವನು

ಗಾಂಧಿತಾತನು ಹಾರ ತುರಾಯಿ
ಕುರ್ಚಿ ತೊರೆದವನು
ಆಂಗ್ಲರ ಎದೆಯಲಿ ನಡುರಾತ್ರಿಯಲಿ
ನಡುಕ ತಂದವನು

ಗಾಂಧಿತಾತನು ಸಾಬರಮತಿಯಲಿ
ಹೊಸ ಪುಟ ತೆರೆದವನು
ಅಮೃತ ಪುರುಷನು ಆತ್ಮೋದ್ಧಾರಕ
ಹೊಸ ಭಾಷ್ಯ ಬರೆದವನು

ಗಾಂಧಿತಾತನು ಮಿಂಚಿನ ನಡಿಗೆಲಿ
ನಡೆದೆ ನಡೆದವನು
ದೇಶವ ಸುತ್ತಿ ಅಭಯವ ನೀಡಿ
ಏಕತೆ ತಂದವನು

ಗಾಂಧಿತಾತನು ಸತ್ಯಕ್ಕಾಗಿಯೆ
ಸೆರೆಮನೆ ಹೊಕ್ಕವನು
ಭಾರತ ದೇಶದ ಬಿಡುಗಡೆಗಾಗಿ
ಭೋಗವ ತೊರೆದವನು

ಗಾಂಧಿತಾತನು ಹುತಾತ್ಮನಾಗಿ
ಧರೆಗೆ ಒರಗಿದನು
ಹೇ ರಾಮ ಎನ್ನುತ ಭೂಮಿಯ ಒಪ್ಪಿ
ಮುಗಿಲನು ಹೊಕ್ಕವನು

**ಲಲಿತಾ ಕೆ ಹೊಸಪ್ಯಾಟಿ**
ಕಲೆ: ಸಂತೋಷ್ ಸಸಿಹಿತ್ಲು



---

## ಕುಂಚ ಪ್ರಪಂಚ

**ರಚನ ಎ.**
9ನೇ ತರಗತಿ, ಫ್ಲೋರೆನ್ಸ್ ಹೈಸ್ಕೂಲ್, ಬೆಂಗಳೂರು





**ಪ್ರಣವಿ ಎನ್.**
6ನೇ ತರಗತಿ, ಡೆಲ್ಲಿ ಪಬ್ಲಿಕ್ ಸ್ಕೂಲ್, ಬೆಂಗಳೂರು



